# ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತ, ಮಂಡ್ಯ.

## 2019-20ನೇ ಸಾಲಿನ 59ನೇ ವಾರ್ಷಿಕ ಸರ್ವ ಸದಸ್ಯರ ಸಭೆಯ ಆಮಂತ್ರಣ ಪತ್ರಿಕೆ

**ಆತ್ಮೀಯ ಸದಸ್ಯರೇ,**

ರಾಜ್ಯದಲ್ಲಿ ಕೋವಿಡ್–19 ಸಾಂಕ್ರಾಮಿಕ ರೋಗವನ್ನು ತಡೆಗಟ್ಟುವ ಹಿನ್ನೆಲೆಯಲ್ಲಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಕಲಂ 121ರಡಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಹಾಗೂ ವಿಪತ್ತು ನಿರ್ವಹಣಾ ಅಧಿನಿಯಮ 2005 ರಡಿಯಲ್ಲಿ ಹೊರಡಿಸಿರುವ ಸರ್ಕಾರದ ಆದೇಶ ಸಂ.ಆರ್‌ಡಿ/158/ಟಿಎನ್‌ಆರ್/ 2020 ದಿನಾಂಕ: 01-10-2020 ರ ಆದೇಶ/ಮಾರ್ಗಸೂಚಿಗಳನ್ನು ಮತ್ತು ಕೋವಿಡ್ -19 ನಿರ್ವಹಣೆಗಾಗಿ ಹೊರಡಿಸಿದ ರಾಷ್ಟ್ರೀಯ ನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಷರತ್ತಿಗೊಳಪಟ್ಟು ಸಹಕಾರ ಸಂಘಗಳ ಅಪರ ನಿಬಂಧಕರು (ಪತ್ತು), ಬೆಂಗಳೂರು ರವರ ಪತ್ರ ಸಂಖ್ಯೆ.ಆರ್‌ಸಿಎಸ್/ಸಿಆರ್‌ಡಿ/ಕೆಎಂ–8/58/2019-20 ದಿನಾಂಕ:06-11-2020 ರ ಆದೇಶದಲ್ಲಿ ಸಹಕಾರಿ ಬ್ಯಾಂಕುಗಳ ಸರ್ವ ಸದಸ್ಯರ ಸಭೆಯನ್ನು **ವೀಡಿಯೋ ಕಾನ್ಫರೆನ್ಸ್/ವರ್ಚುಯಲ್ ಮೀಟಿಂಗ್** ಮೂಲಕ ನಡೆಸಲು ಆದೇಶಿಸಿರುತ್ತಾರೆ.

ಆದ್ದರಿಂದ ನಮ್ಮ ಬ್ಯಾಂಕಿನ **2019-20ನೇ ಸಾಲಿನ 59ನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯನ್ನು 2020ನೇ ಡಿಸೆಂಬರ್ ಮಾಹೆ ತಾರೀಖು 23 ನೇ ಬುಧವಾರ ಬೆಳಿಗ್ಗೆ 11-00 ಗಂಟೆಗೆ ವೀಡಿಯೋ ಕಾನ್ಫರೆನ್ಸ್/ವರ್ಚುಯಲ್ ಮೀಟಿಂಗ್ ಮೂಲಕ** ಬ್ಯಾಂಕಿನ ಪ್ರಧಾನ ಕಛೇರಿಯಲ್ಲಿ

**ಬ್ಯಾಂಕಿನ ಅಧ್ಯಕ್ಷರಾದ**<br>
**ಸನ್ಮಾನ್ಯ ಶ್ರೀ ಸಿ ಪಿ *ಉಮೇಶ್*** ರವರ<br>
**ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿದೆ.**

ಮಾನ್ಯ ಸದಸ್ಯರುಗಳು **ದಿನಾಂಕ: 23-12-2020 ರಂದು ಬೆಳಿಗ್ಗೆ 11-00 ಘಂಟೆಯಿಂದ ವೀಡಿಯೋ ಕಾನ್ಫರೆನ್ಸ್/ವರ್ಚುಯಲ್ ಮೀಟಿಂಗ್** ಮೂಲಕ ಲಾಗಿನ್ ಆಗಿ ವರ್ಚುಯಲ್ ಮಹಾಸಭೆಯಲ್ಲಿ ಭಾಗವಹಿಸಿ ಈ ಮಹಾಸಭೆಯನ್ನು ಯಶಸ್ವಿಗೊಳಿಸಿಕೊಡಬೇಕಾಗಿ ಕೋರಿದೆ.

**ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ**<br>
**ಸಹಿ/–**<br>
**(ಸಿ ವನಜಾಕ್ಷಿ)**<br>
**ಮುಖ್ಯ ಕಾರ್ಯನಿರ್ವಹಣಾಧಿಕಾರಿ**

**ಮಂಡ್ಯ**<br>
**ದಿನಾಂಕ: 07-12-2020**

**ಸೂಚನೆ:–**

1) Video Conference/Virtual Meeting ನ ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸುವ ಪ್ರತಿನಿಧಿಗಳು ಉತ್ತಮ ನೆಟ್‌ವರ್ಕ್ ಹೊಂದಿರುವ ಮೊಬೈಲ್/ಲ್ಯಾಪ್‌ಟ್ಯಾಪ್/ಕಂಪ್ಯೂಟರ್/ಟ್ಯಾಬ್‌ಗಳ ಮೂಲಕ ಲಾಗಿನ್ ಆಗಬಹುದಾಗಿರುತ್ತದೆ.
2) Video Conference/Virtual Meeting ನ ವಾರ್ಷಿಕ ಮಹಾಸಭೆಗೆ ನಿಯೋಜಿಸಲ್ಪಟ್ಟ ಪ್ರತಿನಿಧಿಗೆ ಲಾಗಿನ್ ಐಡಿ ಮತ್ತು ಮೀಟಿಂಗ್ ಲಿಂಕ್‌ನ್ನು ಪ್ರತಿನಿಧಿಯ ಮೊಬೈಲ್ ಸಂಖ್ಯೆಗೆ ಎಸ್‌ಎಂಎಸ್ ಮೂಲಕ ನೀಡಲಾಗುವುದು.